# ಕಂಸನಿಂದ ಸಂಸ!



ಕಲೆ: ಈಶ್ವರ ಬಡಿಗೇರ

**ಕನ್ನಡ ರಂಗಭೂಮಿಯಲ್ಲಿ ಸಂಸ ಅವರದು ಉಜ್ವಲ ಹೆಸರು. ರಂಗಕೃತಿಗಳ ಮೂಲಕ ಗಮನಸೆಳೆದ ಸಂಸ, ವಿಕ್ಷಿಪ್ತ ವ್ಯಕ್ತಿತ್ವದಿಂದಲೂ ಪ್ರಸಿದ್ಧರಾಗಿದ್ದರು. ಜನವರಿ 13 ಅವರ ಜನ್ಮದಿನ. ಸಂಸರು ಜನಿಸಿ 125 ವರ್ಷ ತುಂಬುತ್ತಿರುವ ಸಂದರ್ಭದಲ್ಲಿ ಅವರ ಬದುಕು–ಸಾಧನೆಯ ಸ್ಮರಣೆ.**

■ **ನಾರಾಯಣ ರಾಯಚೂರ್**

ಅದೊಂದು ಸಂಜೆ ವೈ.ಎನ್.ಕೆ. ಜೊತೆ ವಾಕ್ ಮಾಡುತ್ತಿದ್ದಾಗ ಸಡನ್ ಆಗಿ, 'ಹೋಗೋಣ, ನಡೀರಿ' ಎಂದರು. ಸರಿ, ಆಟೊ ಹಿಡಿದು ಹೊರಟೆವು. ಅಲ್ಲೊಂದು ಪುಸ್ತಕ ಬಿಡುಗಡೆ ಕಾರ್ಯಕ್ರಮ. ಸಾಹಿತ್ಯ, ರಂಗಭೂಮಿಯ ಕೆಲವು ಗಣ್ಯರು ಸೇರಿದ್ದರು. ಪುಸ್ತಕದ ಹೆಸರು 'ಸಂಸಸ್ಮರಣೆ'. ರಚನೆಕಾರರು, ಸಂಸರ ಸಹೋದರ ಸಂಬಂಧಿ, ನಿವೃತ್ತ ವಿದೇಶಿ ರಾಯಭಾರಿ, ಅ.ನ. ಸುಬ್ರಹ್ಮಣ್ಯಂ. ಅವರ ಈ ಕೃತಿಯ ಕಥಾನಾಯಕ ಅಸಾಮಾನ್ಯ, ಅಪ್ರತಿಮ, ಪ್ರಚಂಡ ಪ್ರತಿಭೆಯ ನಾಟಕಕಾರ – ಸಂಸ.

ನನಗೆ ಸಂಸರ ಬಗ್ಗೆ ಆಗ ತಿಳಿದದ್ದು ಅಷ್ಟಕ್ಕಷ್ಟೇ. ಲಂಕೇಶರು ಬರೆದಿರುವ ಕಿರುನಾಟಕ 'ಪೊಲೀಸರಿದ್ದಾರೆ ಎಚ್ಚರಿಕೆ'ಯ ಪರಿಚಯವಿತ್ತು, ಅದೂ ಅದರ ಶೀರ್ಷಿಕೆಯ ಕುತೂಹಲಕ್ಕಾಗಿ. ಸಂಸಾರ ತೊಳಲಾಟ, ವಿಕ್ಷಿಪ್ತತೆಗಳ ಆಳ–ಅಗಲದ ಪರಿವೆ ಇರಲಿಲ್ಲ. ಸುಬ್ರಹ್ಮಣ್ಯರ ಮಾತುಗಳನ್ನು ಕೇಳಿಸಿಕೊಂಡ ಮೇಲೆ ಕುತೂಹಲ ಇನ್ನೂ ಹೆಚ್ಚಿತು. ಪುಸ್ತಕ ಕೊಂಡು ತಂದು ಓದಿದ ಮೇಲಂತೂ ಕುತೂಹಲ ಮೇರೆ ಮೀರಿತು. ಕಾಡತೊಡಗಿದರು ಸಂಸ!

**ಸಂಸ 125**

ಎಂಬತ್ತರ ದಶಕದ ಕೊನೆಯ ವರ್ಷಗಳಲ್ಲಿ ಬಿ.ವಿ. ವೈಕುಂಠರಾಜು ನಾಟಕ ಅಕಾಡೆಮಿಯ ಅಧ್ಯಕ್ಷರಾದಾಗ ಸಂಸರ ಬದುಕು, ಬರಹ ಹಾಗೂ ಸಮಗ್ರ ನಾಟಕಗಳ ಸಂಗ್ರಹವೊಂದನ್ನು ಹೊರತರಲು ನಿರ್ಧರಿಸಿ, ಆ ಕಾರ್ಯದಲ್ಲಿ ಸಂಗ್ರಹಣಕಾರನಾಗಿ ಕೆಲಸ ಮಾಡಲು ಅವಕಾಶ ನನಗೆ ಒದಗಿಬಂದಿತು. ಪ್ರೊಫೆಸರ್ ಕ.ವೆಂ. ರಾಜಗೋಪಾಲ್ ಅವರ ಪೂರಕ ಮಾರ್ಗದರ್ಶನವೂ ದೊರೆತು, ಮೈಸೂರಿಗೆ ತೆರಳಿ ಸುಬ್ರಹ್ಮಣ್ಯಂ ಅವರನ್ನು ಭೇಟಿಮಾಡಿ ಮತ್ತಷ್ಟು ವಿಷಯ–ದಾಖಲೆ ಸಂಗ್ರಹಣೆಗೆ ತೊಡಗಿ, ಹಲವು ಮೂಲಗಳಿಂದ ಹತ್ತಾರು ವಿಷಯಗಳನ್ನು ಒಳಗೊಂಡ ಏಳು ನೂರಕ್ಕೂ ಮಿಕ್ಕ ಪುಟಗಳ 'ಸಂಸ ನಾಟಕಗಳು' (765 ಪುಟಗಳ) ಬೃಹತ್ ಗ್ರಂಥದ ಕಾರ್ಯ ಪೂರೈಸಲು ಸಾಧ್ಯವಾಯಿತು. ಆ ವೇಳೆಗೆ ಸಂಸ ನನ್ನ ಮನದಾಳಕ್ಕೆ ಇಳಿದುಬಿಟ್ಟಾಗಿತ್ತು.

ಮುಂದೊಂದ್ಯೆದಾರು ವರ್ಷಗಳ ನಂತರ ಪ್ರೊ. ಕಿ.ರಂ. ನಾಗರಾಜ್, 'ನೀಗಿಕೊಂಡ ಸಂಸ' ಎಂಬ ನಾಟಕ ರಚನೆಗೆ ತೊಡಗಿದಾಗ, ಸಂಸ ಮತ್ತೆ ಮುನ್ನೆಲೆಗೆ ಬಂದ.

ಹಾಗಾದರೆ ಏನಿದು 'ಸಂಸ'?

ಸಂಸ ಅವರ ನಿಜ ಹೆಸರು ಎ.ಎನ್. ಸ್ವಾಮಿ ವೆಂಕಟಾದ್ರಿ ಅಯ್ಯರ್. ತಂದೆ ನರಸಿಂಹ ಪಂಡಿತರು, ತಾಯಿ ಗೌರಮ್ಮ. ಹುಟ್ಟೂರು ಯಳಂದೂರು ತಾಲೂಕಿನ ಅಗರ. ಜನನ, ಜನವರಿ 13, 1898. ಅವರ ಜನ್ಮ ದಿನೋತ್ಸವಕ್ಕೀಗ 125ರ ಗರಿ.

ಅವರೊಮ್ಮೆ 'ವಿಗಡ ವಿಕ್ರಮರಾಯ' ಎಂಬ ನಾಟಕವನ್ನು 'ಕಂಸ' ಎಂಬ ಕಾವ್ಯನಾಮದಿಂದ ಪ್ರಕಟಣೆಗೆ ನೀಡಿದಾಗ, ಮುದ್ರಣ ದೋಷದಿಂದ ಅದು 'ಸಂಸ' ಎಂದಾಯಿತಂತೆ. ಆ ಹೆಸರೇ ಅವರ ಕಾವ್ಯನಾಮವಾಗಿ ಶಾಶ್ವತವಾಗಿ ಉಳಿದುಕೊಂಡಿರಬಹುದೆಂಬ ಪ್ರತೀತಿ. ಸ್ವಾಮಿಯವರು ಸಂಸ ಎನ್ನುವ ಕಾವ್ಯನಾಮವನ್ನು ಉದ್ದೇಶಪೂರ್ವಕವಾಗಿಯೇ ಇಟ್ಟುಕೊಂಡಿರಬೇಕೆಂಬ ವಾದವೂ ಇದೆ.

ಕಿಟ್ಟೆಲ್ ನಿಘಂಟುವಿನಲ್ಲಿ ಸಂಸ ಎಂಬ ಪದಕ್ಕೆ ಸಂಶಯ ಎನ್ನುವ ಅರ್ಥವನ್ನೂ ಕೊಡಲಾಗಿದೆಯಂತೆ. ಸಂಶಯ– ಸ್ಯಾಮ್–ಸಯ, ಸಂಸಯ ಸಂಸೆ– ಡೌಟ್ ಇತ್ಯಾದಿ. ಆದರೆ ಅ.ನ. ಸುಬ್ರಹ್ಮಣ್ಯಂ ಅವರ ಪ್ರಕಾರ, ಸಂಸ ಎಂದರೆ ಸಂಶಯ ಎಂಬ ಅರ್ಥದ ಜೊತೆಗೆ ತೊಂದರೆ, ಅಪಾಯ ಎನ್ನುವ ಅರ್ಥಗಳನ್ನೂ ಗಮನಿಸಬೇಕು. ತಾವು ಅಪಾಯದಲ್ಲಿದ್ದೇವೆ ಎನ್ನುವ ಭಯ ಅವರನ್ನು ಅಪಾರವಾಗಿ ಕಾಡುತ್ತಿತ್ತು... ಎಂದೆಲ್ಲ ಹೇಳಲಾಗಿದೆಯಾದರೂ ನಿಖರ ಕಾರಣ ಸಂಸರಿಗೆ ಮಾತ್ರ ಗೊತ್ತೇನೋ! ಈಜಿಪ್ಟ್, ದಕ್ಷಿಣ ಆಫ್ರಿಕಾ,